ಪಿ.ಡಬ್ಲ್ಯು-01 – ಎಸ್.ಆರ್. ಸುಬ್ಬಲಕ್ಷ್ಮಿ

**ಸಾಕ್ಷಿಯನ್ನು ದಿನಾಂಕಃ 24.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್.ಎಸ್. ವಕೀಲರಿಂದಃ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಹಾಗು ಬರೆಯಲು ಬರುತ್ತದೆ. ಸಾಕ್ಷಿಗೆ ಡಿಮ್ಯಾಂಡ್ ರಿಜಿಸ್ಟರ್ ನ ಪ್ರತಿಯನ್ನು ತೋರಿಸಿ ಅದರಲ್ಲಿ ಜಂಜರ್ ನಂ. 9 ರ ಮುಂದೆ ನಾರಾಯಣಮ್ಮ ಬಿನ್ ನಾರಾಯಣಪ್ಪ ಎಂದು ಹಾಗು ಜಂಜರ್ ನಂ. 9/1ರ ಮುಂದೆ ದೇವಮಣಿ ಬಿನ್ ನಾಗರಾಜು ಎಂದು ಇದೆ ಎಂದರೆ ಸರಿ. ನಾನು ಪ್ರತಿವಾದಿ ದೇವಮಣಿ ವಿರುದ್ಧ ಈ ದಾವೆ ಹೂಡಿರುತ್ತೇನೆ. ಆಕೆ ತನ್ನ ತಕರಾರಿನಲ್ಲಿ ದಾವಾ ಆಸ್ತಿ ಸೈಟು ತನಗೆ ಬೇಕೆಂದು ಪ್ರತಿಪಾದಿಸುತ್ತಾಳೆ. ನಾನು ದಾವಾ ಆಸ್ತಿಯನ್ನು ನಾರಾಯಣಮ್ಮರವರಿಂದ ಖರೀದಿ ಮಾಡಿರುತ್ತೇನೆ. ಸದರಿ ದಾವಾ ಆಸ್ತಿಯು ಸದರಿ ನಾರಾಯಣಮ್ಮರವರಿಗೆ ಅವರ ತಾಯಿ ಮುನಿಯಮ್ಮರವರಿಂದ ಬಂದಿರುತ್ತದೆ. ಸದರಿ ನಾರಾಯಣಮ್ಮರವರಿಗೆ ಅವರ ತಾಯಿ ಮುನಿಯಮ್ಮ ದಾವಾ ಆಸ್ತಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾರಾಯಣಮ್ಮರವರಿಗೆ ಅವರ ತಾಯಿ ಮುನಿಯಮ್ಮ ದಾವಾ ಆಸ್ತಿಯ ಸಂಬಂಧ ದಾನ ಪತ್ರ ಬರೆದುಕೊಟ್ಟಿರುತ್ತಾರೆ. ಆ ರೀತಿ ಮುನಿಯಮ್ಮ ನಾರಾಯಣಮ್ಮರವರಿಗೆ ಯಾವುದೇ ದಾನ ಪತ್ರ ಬರೆದುಕೊಟ್ಟಿರುವುದಿಲ್ಲ ಹಾಗು ಆ ಕಾರಣಕ್ಕಾಗಿ ನಾರಾಯಣಮ್ಮರವರಿಗೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಮುನಿಯಮ್ಮ ತನ್ನ ಮಗಳಾದ ನಾರಾಯಣಮ್ಮರವರಿಗೆ ಬರೆದುಕೊಟ್ಟ ದಾನ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮುನಿಯಮ್ಮರವರಿಗೆ ಒಟ್ಟು ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮುನಿಯಮ್ಮರವರಿಗೆ ನಾರಾಯಣಮ್ಮ ಒಬ್ಬರೇ ಮಗಳು ಅಲ್ಲದೇ ಆಕೆಯನ್ನು ಸೇರಿ ಒಟ್ಟು 07 ಜನ ಮಕ್ಕಳಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಾವುದೇ ಆಸ್ತಿಯನ್ನು ಖರೀದಿ

ಮಾಡುವ ಪೂರ್ವದಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹಾಗು ಸದರಿ ಆಸ್ತಿಯನ್ನು ಮಾರಾಟ ಮಾಡುವವರಿಗೆ ಎಷ್ಟು ಜನ ವಾರಸುದಾರರಿರುತ್ತಾರೆ ಹಾಗು ಸದರಿ ಆಸ್ತಿಯಲ್ಲಿ ಯಾರಿಗೆ ಎಷ್ಟು ಹಕ್ಕು ಇರುತ್ತದೆ ಎನ್ನುವುದೆಲ್ಲವನ್ನು ಪರಿಶೀಲಿಸಿ ನಂತರ ಕ್ರಯಕ್ಕೆ ಪಡೆಯಬೇಕೆಂದರೆ ಸರಿ. ಸಾಕ್ಷಿಯು ಆ ರೀತಿ ಪರಿಶೀಲಿಸಿರುತ್ತೇವೆಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗೆ ಕ್ರಯ ಪತ್ರ ಬರೆದುಕೊಟ್ಟಿದ್ದರು ಎಂದು ಹೇಳಲಾದ ನಾರಾಯಣಮ್ಮರವರು ಅವರ ಸಹೋದರ-ಸಹೋದರಿಯರಿಗೆ ತಿಳಿಯದಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಅಕ್ರಮ ಖಾತೆ ಮಾಡಿಸಿಕೊಂಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಅಕ್ರಮ ಖಾತೆ ಮಾಡಿಸಿದ ನಂತರ ಸದರಿ ನಾರಾಯಣಮ್ಮರವರು ನನಗೆ ಕ್ರಯ ಪತ್ರವನ್ನು ಬರೆದುಕೊಡುವಾಗ ಅಸೆಸ್ ಮೆಂಟ್ 9/1 ರಲ್ಲಿ ಪ್ರತಿವಾದಿಗೆ ಸೇರಿದ ಆಸ್ತಿಯನ್ನ ಸೇರಿಸಿ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆ ರೀತಿ ನಾನು ಹಾಗು ನಾರಾಯಣಮ್ಮ ಶಾಮೀಲಾಗಿ ಪ್ರತಿವಾದಿಗೆ ಸೇರಿದ ಆಸ್ತಿಯನ್ನ ಸೇರಿಸಿ ಕ್ರಯ ಪತ್ರ ಮಾಡಿಕೊಂಡಿರುವುದರಿಂದ ಸದರಿ ಕ್ರಯ ಪತ್ರ ಪ್ರತಿವಾದಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿ ಕಾಣಿಸಿರುವ ಭಾವಚಿತ್ರದಲ್ಲಿ ಶೆಡ್ಡಿನ ಮುಂದೆ ಇರುವ ಹೆಂಗಸು ಪ್ರತಿವಾದಿ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಫೋಟೋವನ್ನು ಪ್ರತಿವಾದಿ ಪರ **ನಿ.ಡಿ.-1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿ ಸದರಿ ಫೋಟೋದಲ್ಲಿ ಶೆಡ್ಡು ಕಿತ್ತಿರುವ ಸ್ಥಿತಿಯಲ್ಲಿರುವುದು ಕಾಣುತ್ತದೆಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಫೋಟೋವನ್ನು ಪ್ರತಿವಾದಿ ಪರ **ನಿ.ಡಿ.-2** ಎಂದು ಗುರುತಿಸಲಾಯಿತು. ನಾನು ನಾರಾಯಣಮ್ಮರವರ ಜೊತೆ ಸೇರಿ ಕ್ರಯ ಪತ್ರ ಬರೆದುಕೊಂಡ ನಂತರ ಸದರಿ ಪ್ರತಿವಾದಿಯ ಜಾಗದಲ್ಲಿದ್ದ ಶೆಡ್ಡನ್ನು ಕಿತ್ತಿರುತ್ತೇವೆಂದರೆ

ಸರಿ. ಆ ರೀತಿ ನಾವು ಶೆಡ್ಡನ್ನ ಕಿತ್ತ ನಂತರ ಪ್ರತಿವಾದಿ ನಮ್ಮ ವಿರುದ್ಧ ಅಂತರಸಂತೆ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆಂದರೆ ಸರಿ. ಪ್ರತಿವಾದಿ ಆ ರೀತಿ ಅಂತರಸಂತೆ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ ನಂತರ ನಾನು ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ಹೂಡಿರುತ್ತೇನೆಂದರೆ ಸರಿ. ಸದರಿ ನಾರಾಯಣಮ್ಮರವರ ಜಂಜರ್ ನಂ. 9 ರ ಆಸ್ತಿ ಹಾಗು ಪ್ರತಿವಾದಿಯ ಅಸೆಸ್ ಮೆಂಟ್ ನಂ. 9/1 ರ ಆಸ್ತಿ ಅಕ್ಕ-ಪಕ್ಕ ಇರುತ್ತವೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನಾರಾಯಣಮ್ಮರವರಿಂದ ಖರೀದಿ ಮಾಡಿದ ನಂತರ ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಂದ ಅಳತೆ ಮಾಡಿಸಿರುವುದಿಲ್ಲ. ನಾನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಅಥವಾ ನಂತರ ದಾವಾ ಆಸ್ತಿಯನ್ನು ಅಳತೆ ಮಾಡಿಸದೇ ಇರುವುದರಿಂದ ಅದರ ನಿಖರವಾದ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ ಹಾಗು ನನಗೆ ಕ್ರಯಕ್ಕೆ ನೀಡಿದ ನಾರಾಯಣಮ್ಮರವರು ತಿಳಿಸಿದ ಮೇರೆಗೆ ದಾವಾ ಆಸ್ತಿಯ ವಿಸ್ತೀರ್ಣ ನಮೂದಿಸಿರುತ್ತೇನೆಂದರೆ ಸರಿ. ಪ್ರತಿವಾದಿ ನನಗೆ ಯಾವ ಸಮಯದಲ್ಲಿಯೂ ನನಗೆ ತೊಂದರೆ ಕೊಡದೇ ಇದ್ದಾಗ್ಯೂ ಸಹ ನಾನು ಪ್ರತಿವಾದಿಗೆ ಸೇರಿದ ಶೆಡ್ಡನ್ನು ಕೆಡವಿ, ಹಾನಿ ಮಾಡಿದ ಸಂಬಂಧ ಪ್ರತಿವಾದಿ ನನ್ನ ವಿರುದ್ಧ ಪೋಲೀಸರಿಗೆ ದೂರನ್ನು ನೀಡಿದ ಕಾರಣ ನಾನು ಪ್ರತಿವಾದಿಯ ವಿರುದ್ಧ ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಆ ರೀತಿ ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**